# ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೀಳಗಿ

**ಸಿ.ಸಿ.ನಂ.45/2020**

1) ಕರ್ನಾಟಕ ಸರಕಾರ

....... ಪಿರ್ಯಾದಿದಾರರು

ವಿರುದ್ಧ

1) ಜಾನುಭಾಯಿ ಸುರೇಶ ಲಮಾಣಿ
ಸಾಃ ಸುನಗ ಎಲ್.ಟಿ-1 ಗ್ರಾಮ, ತಾಃ ಬೀಳಗಿ

........ ಆರೋಪಿ

## : ದೋಷಾರೋಪಣೆ :

ದಿನಾಂಕ: 29-05-2019 ರಂದು ಸಂಜೆ 06.00 ಗಂಟೆಗೆ ಬೀಳಗಿ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಸುನಗ ತಾಂಡಾ-1 ರಲ್ಲಿ ಬಸ ನಿಲ್ದಾಣದ ಮುಂದೆ ಇರುವ ಜಾನೂಭಾಯಿ ಹೊಟೇಲದಲ್ಲಿ ಆರೋಪಿಯಾದ ನೀನು 180 ಮಿ.ಲೀ ಅಳತೆಯ 8 ಪಿ.ಎಂ ವಿಸ್ಕಿ ಕಂಪನಿಯ 10 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಬ್ಯಾಗಪೇಪರ್ಸ ಡಿಲಕ್ಸ ವಿಸ್ಕಿ ಕಂಪನಿಯ 40 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಓಲ್ಡ ಟಾವರಿನ್ ವಿಸ್ಕಿ ಕಂಪನಿಯ 62 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಓರಿಜಿನಲ್ ಚಾಯ್ಸ ವಿಸ್ಕಿ ಕಂಪನಿಯ 15 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಮ್ಯಾಕಡಾವೆಲ್ಸ ಡಿಲಕ್ಸ ರಮ್ ಕಂಪನಿಯ 12 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಖೋಡೇಜ್ ರಮ್ ಕಂಪನಿಯ 23 ಟೇಟ್ರಾ ಪ್ಯಾಕೇಟ, 180 ಮಿ.ಲೀ ಅಳತೆಯ ಆಫಿಸರ್ ಚಾಯಿಸ್ ವಿಸ್ಕಿ ಕಂಪನಿಯ 10 ಟೇಟ್ರಾ ಪ್ಯಾಕೇಟ ಸಾರಾಯಿಯನ್ನು, 650 ಮಿ.ಲೀ ಅಳತೆಯ ಕಿಂಗ್ ಫೀಶರ್ ಬೀಯರ ಕಂಪನಿಯ 13 ಬಾಟಲಿಗಳು, 330 ಮಿ.ಲೀ ಅಳತೆಯ ಕಿಂಗ್ ಫೀಶರ್ ಬೀಯರ ಕಂಪನಿಯ 31 ಬಾಟಲಿಗಳು ಬಾಟಲಿಗಳನ್ನು ಅಕ್ರಮವಾಗಿ ಶೇಖರಿಸಿ ಇಟ್ಟುಕೊಂಡಿರುವುದು ಕಂಡುಬಂದಿದ್ದು ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಎರಡನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ ಆರೋಪಿತಯಾದ ನೀನು ಅನಧೀಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಸದರಿ ಸರಾಯಿಯನ್ನು ನಿನ್ನ ತಾಬಾದಲ್ಲಿಟ್ಟುಕೊಂಡಾಗ ಸಿಕ್ಕಿದ್ದು ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

JS.V

Scanned with CamScanner

ಕಾರಣ ಮೇಲಿನ ಅಪರಾಧಗಳಿಗಾಗಿ ನಿಮ್ಮನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಆದೇಶಿಸಲಾಗುವುದು.

ಪ್ರಶ್ನೆ1: ಈ ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ?

ಉತ್ತರ: ತಿಳಿದಿದೆ

ಪ್ರಶ್ನೆ2: ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರ: ವಿಚಾರಣೆ ಆಗಲಿ

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಯಿತು.)

J.S.V

15/3/22

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೀಳಗಿ.

Scanned with CamScanner